ನಾನೂ ಕೂಡ ಎರಡು - ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ತಾಲ್ಲೂಕಾದ ಶಿವಾರಪಟ್ಟಣದಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನವಾಯಿತು. ಸಾಹಿತಿಗಳು ಬಹುಶಃ ಮರೆತಂತಿದೆ; ಸಾಹಿತ್ಯ ಬೆಳೆದು ಬಂದಿರುವುದೇ ರಾಜಕಾರಣದಲ್ಲಿ. ರಾಜರ ಆಶ್ರಯದಲ್ಲಿ ಹಿಂದಿನಿಂದಲೂ ಸಾಹಿತ್ಯ ಬೆಳೆದು ಬಂದಿದೆ. ಪ್ರಮುಖ ವಾರಪತ್ರಿಕೆಯಾದ ತರಂಗ ವಾರ ಪತ್ರಿಕೆ ಏನಿದೆ ಅದರ ಸಂಪಾದಕರಾದ ಸಂತೋಷ ಕುಮಾರ್ ಗುಲ್ವಾಡಿಯವರು ರಾಜಕಾರಣದ ಬಗ್ಗೆ ಎಷ್ಟು ಕೀಳಾಗಿ ಮಾತನಾಡಿದರೆಂದರೆ ನಾನು ಆ ಸಭೆಯಲ್ಲಿ ಇರಲು ಸಾಧ್ಯವಾಗಲಿಲ್ಲ; ನಾನು ಅದನ್ನು ಪ್ರತಿಭಟನೆ ಮಾಡಿದೆ, ನನಗೆ ಆ ಸ್ಟೇಜ್ನಲ್ಲಿ ಇರಲೂ ಆಗಲಿಲ್ಲ. ಇಂಥಹ ಒಂದು ಪ್ರವೃತ್ತಿ ಅನೇಕ ಸಾಹಿತಿಗಳಲ್ಲಿದೆ. ಬಹುಶಃ ಇದು ಕೇವಲ ಶಾಸಕರ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟಿರತಕ್ಕದಲ್ಲ, ರಾಜಕಾರಣಕ್ಕೂ ಮತ್ತು ಸಾಹಿತ್ಯಕ್ಕೂ ಸಂಬಂಧಪಟ್ಟಂತಹ ಒಂದು ಜಿಜ್ಞಾಸೆ ನಮ್ಮ ಕರ್ನಾಟಕ ರಾಜ್ಯದಲ್ಲಿದೆ. ಆದ್ದರಿಂದ ಇದರ ಬಗ್ಗೆ ಅಮೂಲಾಗ್ರವಾದಂಥ ಚರ್ಚೆಯನ್ನು ಇಲ್ಲಿ ನಡೆಸಿ ಇದಕ್ಕೆ ಕಡಿವಾಣವನ್ನು ಹಾಕಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಅವರು ಇಷ್ಟೊಂದು ಮಾತನಾಡಿದರಲ್ಲಾ, ಅವರಿಗೆ ಏನಾದರೂ ಹೇಳಿ.

(ಗೊಂದಲ)

ಅಧ್ಯಕ್ಷರು : ಅವರು ಹೇಳಿದರಲ್ಲಾ, ಇಲ್ಲ ಎಂದು ಹೇಳಿ. ಅವರು ಉತ್ತರ ಹೇಳಿದ್ದನ್ನು ನೀವು ಕೇಳಲಿಲ್ಲವೇ? ಉತ್ತರದ ಕಡೆ ಸ್ವಲ್ಪ ಲಕ್ಷ್ಯ ಕೊಡಿ.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೇ, ಹಿಂದಿನ ಸಂಸ್ಕೃತಿ ಸಚಿವರಾದ ಡಾ॥ ಜೀವರಾಜ ಆಳ್ವ ಅವರು ಮತ್ತು ಶ್ರೀ ವಾಟಾಳ್ ನಾಗರಾಜ್ ಅವರು ಸೂಕ್ಷ್ಮವಾದಂತಹ ವಿಚಾರಗಳನ್ನು ಹೇಳಿದ್ದಾರೆ. ನಿಜ, ಇವತ್ತು ರಾಜಕಾರಣಿಗಳು, ರಾಜಕೀಯವೆಂದರೆ ಸಾಹಿತಿಗಳಲ್ಲೂ ಕೂಡ ಒಂದು ಅಸ್ಪಶ್ಯತಾ ಮನೋಭಾವವಿದೆ. ಅದು ಯಾರೇ ಆದರೂ ಕೂಡ ಖಂಡಿಸುವಂತಹ ವಿಚಾರ ಹೌದು. ಈಗ ಡಾ. ಜೀವರಾಜಆಳ್ವ ಅವರು ಹೇಳಿದ ಹಾಗೆ ಯಾರು ಅಧಿಕಾರದಲ್ಲಿ ಇರುತ್ತಾರೆ ಅವರನ್ನು ಓಲೈಸುವಂಥಾದ್ದು ಸಹಜ. ಅದು ನಡೆಯುತ್ತದೆ. ಆದರೆ ಯಾರು ರಾಜಕೀಯದಲ್ಲಿ ಇದ್ದುಕೊಂಡು ಈ ನಾಡುನುಡಿಗೆ ಹೆಚ್ಚಿಕೆ ಶ್ರಮಿಸಿರುತ್ತಾರೆ, ಅವರನ್ನು ಗೌರವಿಸುವಂಥಾದ್ದನ್ನು ಕೂಡ ನಮ್ಮ ಪ್ರತಿನಿಧಿ ಸಭೆಯಾದ ಕನ್ನಡ ಸಾಹಿತ್ಯ ಪರಿಷತ್ತು ಮಾಡಬೇಕು. ಅದು ಅದರ ಕರ್ತವ್ಯ ಕೂಡ ಹೌದು ಎನ್ನತಕ್ಕಂಥದ್ದನ್ನು ಹಿರಿಯ ಸದಸ್ಯರು ಜ್ಞಾಪಕ ಮಾಡಿಕೊಟ್ಟಿದ್ದಾರೆ. ಅವರು ಇಲ್ಲಿ ಏನು ಸಲಹೆ ಕೊಟ್ಟಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಮತ್ತು ಈ ಪ್ರಾಥಮಿಕ ಸಂಸ್ಥೆಯನ್ನು ತಿದ್ದುವಲ್ಲಿ ನಾವು ತಮ್ಮೆಲ್ಲರ ಸಹಕಾರ ತೆಗೆದುಕೊಂಡು ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

(1) ಚಾಮರಾಜನಗರ ಭೂ ಸ್ವಾಧೀನ ಕಛೇರಿ ಜಪ್ತಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಚಾಮರಾಜನಗರದ ಭೂ ಸ್ವಾಧೀನ ಕಛೇರಿ ಜಪ್ತಿಯಾಗಿದೆ. ಕಾರಣವೇನು ಎಂದರೆ ನ್ಯಾಯಾಲಯದಿಂದ ಜಪ್ತಿಯಾಗಿ ಅಲ್ಲಿದ್ದ ಕುರ್ಚಿ, ಬೆಂಚುಗಳನ್ನು ಎತ್ತುಕೊಂಡು ಹೋಗಿದ್ದಾರೆ. ಚಾಮರಾಜನಗರ, ನಂಜನಗೂಡು, ಎಳಂದೂರು, ಕೊಳ್ಳೆಗಾಲ, ಗುಂಡ್ಲುಪೇಟೆ, ಈ ಪ್ರದೇಶಗಳಲ್ಲಿ ಕಬಿನಿ ಯೋಜನೆಯ ಅಂಗವಾಗಿ ಈ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡ ನಂತರ

ಇವತ್ತಿನವರೆಗೂ ರೈತರಿಗೆ ಕೊಡಬೇಕಾದಂತಹ ಪರಿಹಾರ ಇದುವರೆಗೂ ಕೊಟ್ಟಿಲ್ಲ. ಒಟ್ಟು ಎರಡೂವರೆ ಕೋಟಿ ರೂ. ಇದೆ. ಜಪ್ತಿಯಾಗಿರತಕ್ಕದ್ದು ಎರಡನೆಯ ಬಾರಿ. ಮಾನ್ಯ ಮುಖ್ಯಮಂತ್ರಿಗಳು ಹೋದ ಕಡೆಗಳಲ್ಲೆಲ್ಲಾ ನಮ್ಮ ಸರ್ಕಾರದ ಆರ್ಥಿಕ ಪರಿಸ್ಥಿತಿ ಭದ್ರವಾಗಿದೆ, ನಾವೆಲ್ಲಾ ಚೆನ್ನಾಗಿದ್ದೇವೆ. ನಮಗೆ ಹಣಕಾಸಿನ ತೊಂದರೆ ಏನು ಇಲ್ಲ ಎಂದು ಹೇಳುತ್ತಿದ್ದಾರೆ. ಇಲ್ಲಿ ಜಪ್ತಿಯಾಗಿರತಕ್ಕದ್ದು ಖಾಸಗಿಯವರ ಮನೆಯಲ್ಲ; ಅಥವಾ ಕಾರ್ಖಾನೆಯಲ್ಲ. ಇಲ್ಲಿ ಜಪ್ತಿಯಾಗಿರುವುದು ಸರ್ಕಾರದ ಭೂ ಸ್ವಾಧೀನ ಅಧಿಕಾರಿಗಳ ಕಛೇರಿ. ಇಷ್ಟು ಆದರೂ ಸಹ ಸರ್ಕಾರ ಒಂದಲ್ಲ ನೂರಾರು ಬಾರಿ ನಾವು ಹೇಳಿಕೆಯನ್ನು ಕೊಟ್ಟು ಒತ್ತಾಯ ಮಾಡಿದರೂ ಆ ರೈತರ ಹಣವನ್ನು ಕೊಡುವಲ್ಲಿ ಸರ್ಕಾರ ಮುಂದಾಗಿಲ್ಲ. ಆದುದರಿಂದ ನೀರಾವರಿ ಇಲಾಖೆಯ ಮಂತ್ರಿಗಳಾದ ಮಾನ್ಯ ಉಪ ಮುಖ್ಯಮಂತ್ರಿಗಳನ್ನು ನಾನು ತಮ್ಮ ಮೂಲಕ ಅತ್ಯಂತ ಕಳಕಳಿಯ ಪ್ರಾರ್ಥನೆ ಮಾಡುತ್ತಿದ್ದೇನೆ. ಎರಡೂವರೆ ಕೋಟಿ ರೂಪಾಯಿಗಳು ಅಲ್ಲಿ ಕಬಿನಿ ಯೋಜನೆಗಾಗಿ ಭೂಮಿಯನ್ನು ವಶಪಡಿಸಿಕೊಂಡ ರೈತರಿಗೆ ಪರಿಹಾರ ಕೊಡಬೇಕಾಗಿದೆ. ಇಲ್ಲಿ ಜಪ್ತಿಯಾಗಿರುವುದು 2ನೇ ಬಾರಿ, ಅಲ್ಲಿರುವಂತಹ ಅಧಿಕಾರಿಗಳು ಜಪ್ತಿಯಿಂದ ತಪ್ಪಿಸಿಕೊಂಡು ಭಯಭೀತಿಯಿಂದ ಹೊರಗೆ ಹೋಗಬೇಕಾದಂಥ ಪರಿಸ್ಥಿತಿಯಾಗಿದೆ. ಕುರ್ಚಿ, ಬೆಂಚುಗಳನ್ನು ಹೊತ್ತುಕೊಂಡು ಹೋಗಿದ್ದಾರೆ. ಆದುದರಿಂದ ಮಾನ್ಯ ಉಪಮುಖ್ಯಮಂತ್ರಿಯವರಲ್ಲಿ ನಮ್ಮ ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇವೆ. ನೀವು ಏನು ಕ್ರಮ ತೆಗದುಕೊಳ್ಳುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಸರ್ಕಾರದ ಇಲಾಖೆ ಜಪ್ತಿಯಾಗಿರತಕ್ಕದ್ದು ಎಂದರೆ ನಿಜವಾಗಿ ನಾಚಿಕೆ ಪಡುವಂಥಾದ್ದು. ಸರ್ಕಾರದಲ್ಲಿ ಹಣ ಇದೆಯೋ ಇಲ್ಲವೋ ಎಂಬುದರ ಬಗ್ಗೆ ಉತ್ತರವನ್ನು ಕೊಡಬೇಕು. ಕಂದಾಯ ಸಚಿವರು ಮತ್ತು ನೀರಾವರಿ ಸಚಿವರು ಇದ್ದಾರೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ನಾನು ಕಳಕಳಿಯ ಮನವಿಯನ್ನು ಮಾಡುತ್ತೇನೆ.

ಶ್ರೀ ಎಂ. ಮಹದೇವು: ಮಾನ್ಯ ಅಧ್ಯಕ್ಷರೇ, ನಂಜನಗೂಡಿನಲ್ಲಿ....

MR. SPEAKER : I don't allow....,

(ಗೊಂದಲ)

ಶ್ರೀ ಎಂ. ಮಹದೇವು: ಮಾನ್ಯ ಅಧ್ಯಕ್ಷರೆ, ಅಸಿಸ್ಟೆಂಟ್ ಕಮೀಷನರ್ ಆಫೀಸ್ ಜಪ್ತಿಯಾಗಿದೆ. ಅಲ್ಲಿ ಲ್ಯಾಂಡ್ ಅಕ್ವೈರ್ ಮಾಡಿಕೊಂಡು ಸುಮಾರು ಹತ್ತಾರು ಲಕ್ಷ ರೂಪಾಯಿಗಳು ಹಾಗೆ....

ಅಧಕ್ಷರು: ಈ ರೀತಿಯಾದರೆ ಎಲ್ಲಾರೂ ಕೇಳುತ್ತಾ ಹೋಗುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ, ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಒಂದು ಆಫೀಸ್ ಜಪ್ತಿಯಾಗಿದೆ ಎಂದು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ಅಂಕಿಅಂಶಗಳನ್ನು, ಮಾಹಿತಿಗಳನ್ನು ಪಡೆದು ಒಂದು ಹೇಳಿಕೆಯನ್ನು ನಾನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಯಾವತ್ತು ಕೊಡುತ್ತೀರಿ?

ಶ್ರೀ ಎಸ್.ಎಂ. ಕೃಷ್ಣ: ನಾಳೆ ಕೊಡುತ್ತೇನೆ.

(2) ತುಮಕೂರಿನಲ್ಲಿ ಹಾಲು ಉತ್ಪಾದನೆ ಮಾಡಿರತಕ್ಕ ರೈತರಿಗೆ ಹಣ ಕೊಡದೆ ಇರುವುದು

+ ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಕಳೆದ ಕೆಲವು ದಿವಸದ ಹಿಂದೆ ತುಮಕೂರಿನಲ್ಲಿ ರೈತರಿಗೆ ಹಾಲು ಉತ್ಪಾದನೆ ಮಾಡಿರತಕ್ಕಂತಹವರ ಹಣ ಕೊಡದೇ ಇರುವುದರ ಬಗ್ಗೆ ನಾವು ತಮ್ಮ ಗಮನಕ್ಕೆ ತಂದಾಗ ಸರ್ಕಾರ ಏನೋ ಒಂದು ವ್ಯವಸ್ಥೆ ಮಾಡಿತು. ಆದಾದನಂತರ ಮಂಡ್ಯ ಜಿಲ್ಲೆಯಲ್ಲಿ ಅದೇ ಪರಿಸ್ಥಿತಿ ಉದ್ಭವವಾಗಿತ್ತು. ಆಗಲೂ ಸಹ ಅದಕ್ಕೆ ಅವಕಾಶ ಕೊಟ್ಟರಿ, ಅದೂ ಒಂದೊಂದೇ ಎಲ್ಲಾ ವ್ಯವಸ್ಥೆ